ಹಣತೆಗಳಿಂದ ಕಿಕ್ಕಿರಿದು ತಂತಾನೇ ಬೆಳಗುತ್ತಿತ್ತು! ಮೂಕವಿಸ್ಮಿತರಾದ ಅಧಿಕಾರಿಗಳು ಒಬ್ಬರಾದ ಮೇಲೊಬ್ಬರು ಬಂದರು, ಮೋಂಬತ್ತಿ ಬೆಳಕಿನಲ್ಲಿ ವಿಸ್ತೃತವಾಗಿ ಶೋಧಿಸಿ ವರದಿ ಸಲ್ಲಿಸಿದರು.

ಗುಹೆಗಳ ಪ್ರಾಮುಖ್ಯವನ್ನು ಅರಿತ ಟಾನೆ ಮತ್ತು ಹುಟಿ 1889ರಿಂದ ತಂಡತಂಡವಾಗಿ ಗುಹೆಗೆ ಪ್ರವಾಸಿಗಳನ್ನು ಕರೆತಂದು ತೋರಿಸತೊಡಗಿದರು. ರೈಲು ರಸ್ತೆ ನಿರ್ಮಾಣವಾಯಿತು. ಇದುವರೆಗೆ ನಿರ್ಜನವಾಗಿದ್ದ ಗುಹೆಗಳಿಗೆ ವರ್ಷಕ್ಕೆ ಐದುನೂರು ಜನ ಭೇಟಿ ನೀಡತೊಡಗಿದರು. ಬಂದವರು ಸುಮ್ಮನೆ ಹೋಗಲಿಲ್ಲ, ಗೋಡೆಗಳ ಮೇಲೆ ತಮ್ಮ ಹೆಸರು, ಸಂದೇಶ ಕೆತ್ತಿದರು. 1905ರಲ್ಲಿ ಗುಹೆಯ ಗೋಡೆಗಳ ಮೇಲೆ ಭಿತ್ತಿ ಬರಹ ನಡೆಸಿದ್ದನ್ನು ಗಮನಿಸಿದ ಅಧಿಕಾರಿಗಳು ಆ ನೆಪ ಹೂಡಿ 625 ಪೌಂಡುಗಳಿಗೆ ಗುಹೆಗಳನ್ನು ಸರ್ಕಾರದ ಸುಪರ್ದಿಗೆ ಪಡೆದರು. ಗುಹೆಗಳ ಸ್ವಾಮ್ಯದ ಬಗೆಗೆ ಸಾಕಷ್ಟು ಸಂಘರ್ಷ ನಡೆಯಿತು. ನಂತರ ಒಬ್ಬರಾದ ಮೇಲೊಬ್ಬರ ಕೈಗೆ ಚಲಿಸಿದ ಗುಹೆಯು 1989ರಿಂದ ಟಾನೆ ಹುಟಿ ದಂಪತಿಗಳ ವಂಶಸ್ಥರ ಭಾಗಶಃ ಸುಪರ್ದಿಗೆ ಬಂದಿತು. ಅವರೀಗ ಪ್ರವಾಸಿಗಳನ್ನು ಒಳಗೊಯ್ದು ವಿವರಿಸಿ, ತೋರಿಸಿ, ಕರೆತರುವುದಲ್ಲದೆ ಭೇಟಿ ಮಾಡುವವರಿಂದ ಬರುವ ಹಣದಲ್ಲಿ ಪಾಲು ಪಡೆಯುತ್ತಾರೆ. ಗುಹೆಗಳ ಅಭಿವೃದ್ಧಿನಿರ್ವಹಣೆಯ ಪಾಲುದಾರರೂ ಆಗಿದ್ದಾರೆ.

ನಮ್ಮ ಜೊತೆ ಬಂದ ಮರಡೋನಾ, ಟಾನೆ ಹುಟಿ ವಂಶಸ್ಥನಂತೆ! ಗುಹೆಗಳ ಉಷ್ಣತೆ, ಕಲ್ಲುಗಳ ನೀರಿನ ಉಷ್ಣತೆ, ಕಾರ್ಬನ್ ಡೈ ಆಕ್ಸೈಡ್ ಮಟ್ಟ, ತೇವಾಂಶ ಎಲ್ಲವನ್ನು ಕಾಲಕಾಲಕ್ಕೆ ಅಳೆಯುವ ತಜ್ಞರ ಸಮಿತಿಯಲ್ಲೂ ಅವನಿರುವನಂತೆ. ಗುಹೆಗಳು ಮೊದಲು ಕಡಲಾಳದಲ್ಲಿದ್ದದ್ದಕ್ಕೆ ಸಾಕ್ಷಿಯಾಗಿ ಕಪ್ಪೆಚಿಪ್ಪು, ಹವಳ ಜೀವಿ, ಮೀನಿನ ಮೂಳೆ ಮೊದಲಾದ ಕಡಲಜೀವಿಗಳ ಪಳೆಯುಳಿಕೆಗಳು ಗೋಡೆ, ಸೂರಿನ ಮೇಲೆ ಕಂಡವು. ಅಲ್ಲಿ ಅಂತಹ ಮುನ್ನೂರು ಗುಹೆಗಳಿವೆ ಎಂದವನು ವಿವರಿಸಿದ.

ಗುಹೆಯ ನಾನಾ ಭಾಗಗಳಿಗೆ ಚರ್ಚಿನ ಹೆಸರುಗಳನ್ನು ಇಟ್ಟಿದ್ದಾರೆ. ಮೊದಲು ಕೆಟಕೋಂಬ್ ನೋಡಿದೆವು. ಆನಂತರ ಬಾಂಕ್ವೆಟ್ ಚೇಂಬರ್ ಪ್ರವೇಶಿಸಿದೆವು. ಮೇಲಿನಿಂದ ಕೆಳಗೆ ತೊಟ್ಟಿಕ್ಕುವ ನೀರಿನ ಗುಂಟ ಸುಣ್ಣಕಲ್ಲಿನ ಕಂಬಕೋಲು ರೂಪುಗೊಂಡಿವೆ. ಮೇಲಿನಿಂದ ಬಿಳಲಿನಂತೆ ಇಳಿವ, ಕೆಳಗಿನಿಂತ ಹುತ್ತದಂತೆ ಮೇಲೆ ಹೋಗಿರುವ ರಚನೆಗಳು ಒಂದನ್ನೊಂದು ಸಂಧಿಸಿ ಕೆಲವೆಡೆ ಬೃಹತ್ ಸ್ತಂಭ ರೂಪುಗೊಂಡಿದೆ. ಅದು ಕ್ಯಾಥೆಡ್ರಲ್. ಅಲ್ಲಿ 16 ಮೀಟರ್ ಎತ್ತರದ ಒಂದು ಸ್ತಂಭವಿದೆ! ಆ ಭಾಗವು ಉತ್ತಮ ಪ್ರತಿಧ್ವನಿ ಸಾಮರ್ಥ್ಯ ಹೊಂದಿದೆ. ಕ್ಯಾರಲ್ ಹಾಡಬಹುದು ಎಂದು ಮರಡೋನಾ ಸೂಚಿಸಿದ. ಹಲವು ಖ್ಯಾತನಾಮರು ಅಲ್ಲಿ ಹಾಡಿ ಹೋಗಿದ್ದಾರೆಂದ. ನಮ್ಮ ಗುಂಪಿನ ಕೆಲವರು ಒಗ್ಗೂಡಿ ಕ್ಯಾರಲ್ ಹಾಡಿದರು. ನನ್ನ ನೆಚ್ಚಿನ ಕವಿ ಮೂಡ್ನಾಕೂಡು ಅವರ ಹಾಡು ಹಾಡಲು ಹೋದೆ. ಜೊತೆಗೂಡುವವರಿಲ್ಲದೆ ಪ್ರತಿಧ್ವನಿ ಕೇಳಿಬರಲಿಲ್ಲ.

ಈ ಗುಹೆ, ಅದರ ಪ್ರತಿ ರಚನೆ ಈಗಲೂ ಬೆಳೆಯುತ್ತಿವೆಯಂತೆ. ಒಂದು ಚದರ ಸೆಂಟಿಮೀಟರ್ ಬೆಳೆಯಲು ಸುಣ್ಣಕಲ್ಲಿಗೆ 100 ವರ್ಷ ಬೇಕಂತೆ! ಎಂದರೆ ಹುಲುಮಾನವರಾದ ನಾವು ಸುಣ್ಣಕಲ್ಲಿನ ಲೆಕ್ಕದಲ್ಲಿ ಒಂದು ಸೆಂಟಿಮೀಟರ್ ಕೂಡ ಬೆಳೆಯಲಾರದ ಕುಬ್ಜರು! ಹಾಗಿರುತ್ತ ಹದಿನಾರು ಮೀಟರ್ ಎತ್ತರದ ಸ್ತಂಭ, ಇಷ್ಟೊಂದು ಸುಂದರ ಕಲಾಕೃತಿಗಳು ರೂಪುಗೊಂಡಿರುವ ಮೂರು ಕೋಟಿ ವರ್ಷಗಳ ದೀರ್ಘ ಕಾಲಮಾನ! ಅದನ್ನು ಬೆಳಗುವ ಬರಿಯ ಹನ್ನೊಂದು ತಿಂಗಳ ಆಯಸ್ಸಿನ ಬೆಳಕಿನ ಹುಳ!

## ಮೂಕವಾಗಿದೆ ಕಾಲವಿಲ್ಲಿ!

ಬೆಳಕಿನ ಬೀಜಗಳು ನಾವು, ನಮಗೆಲ್ಲಿಯ ಸಾವು?

ಮೆಟ್ಟಿಲಿಳಿದು ಮುಂದೆ ಹೋದೆವು. ಏನೇನೂ ಕಾಣದ ಕಗ್ಗತ್ತಲು. ಕಂಬಿ ಹಿಡಿದು ತನ್ನ ಹೆಜ್ಜೆಸದ್ದುಗಳ ಅನುಸರಿಸಿ ಮೆಲ್ಲ ಹಿಂಬಾಲಿಸುವಂತೆ ಮರಡೋನಾ ಮೊದಲೇ ತಿಳಿಸಿದ್ದ. ಇದು ನಮಗೆ ಸಂಪೂರ್ಣ ಹೊಸ ಅನುಭವ. ಕುರುಡಾಗುವುದು ಎಂದರೇನು ಎಂದು ಒಮ್ಮೆಲೇ ಅರಿವಿಗೆ ಬಂತು.

ಕಗ್ಗತ್ತಲು, ನಿಶ್ಶಬ್ದವನ್ನು ಸೀಳಿ ಸಳಸಳ ನೀರು ಸರಿಸುತ್ತ ಮರಡೋನಾ ಮುನ್ನಡೆಯುತ್ತಿದ್ದ. ಇದ್ದಕ್ಕಿದ್ದಂತೆ ನಿಂತ ಅವ ಒಮ್ಮೆ ಕ್ಷೀಣ ಬೆಳಕು ಹರಿಸಿದ. ದೂರದಲ್ಲಿ ಒಂದು ದೋಣಿ ನಿಂತಿತ್ತು. ಬ್ಯಾಟರಿ ಬೆಳಕು ಬಿಡುತ್ತ ಆರಿಸುತ್ತ ಒಬ್ಬೊಬ್ಬರನ್ನೇ ಅದರಲ್ಲಿ ಕೂರಿಸಿದ. ತನ್ನ ತಲೆ ಮೇಲಿದ್ದ ಹಗ್ಗ ಹಿಡಿದು ನಿಂತು ಕಾಲೊತ್ತುತ್ತ ಸಮತೋಲ ಮಾಡುತ್ತ ನಿಧಾನ ದೋಣಿ ಚಲಾಯಿಸತೊಡಗಿದ.

ಭೂಮಿಯಾಳದ ಗುಹೆ. ಅಗಾಧ ನಿಶ್ಶಬ್ದ. ನಮ್ಮ ಉಸಿರೂ ಕೇಳುತ್ತಿದೆ ಎನ್ನುವ ಹಾಗೆ. ಟಪ ಟಪ ಟಪ... ಅಲ್ಲೆಲ್ಲೊ ನೀರು ತೊಟ್ಟಿಕ್ಕುವ ಸದ್ದು ಕೇಳುತ್ತಿದೆ. ಗುರಿಕಾರ ಹಗ್ಗ ಜಗ್ಗುತ್ತ, ಕೂತು, ಎದ್ದು ತನ್ನ ಮೈಯ ಚಲನೆಯಿಂದಲೇ ಸಮತೋಲಗೊಳಿಸುತ್ತ ಹುಟ್ಟಿಲ್ಲದೆ ದೋಣಿ ನಡೆಸುತ್ತಿದ್ದಾನೆ. ಮೇಲೆ, ಕೆಳಗೆ, ಆಚೆ, ಈಚೆ ಎಂಥದೂ ಇಲ್ಲದ ಅಗಾಧ ಕಗ್ಗತ್ತಲು. ಕಣ್ಮುಚ್ಚಬೇಕೆನಿಸಿತು. ಕೆಲವರು ಕತ್ತಲಿಗೆ ಹೊಂದಿಕೊಳ್ಳಲಾಗದೇ ಪಿಸಿಪಿಸಿ ಎನ್ನುತ್ತಿದ್ದರು.

ಓ! ಮೈ! ಇದ್ದಕ್ಕಿದ್ದಂತೆ ಆಶ್ಚರ್ಯೋದ್ಗಾರಗಳು ಕೇಳಿಬಂದವು. ಕಣ್ಣು ಬಿಟ್ಟರೆ ಆಗಸದಲ್ಲಿ ಸಾವಿರಾರು ನಕ್ಷತ್ರಗಳು ಮಿನುಗುತ್ತಿವೆಯೋ ಎಂಬ ಹಾಗೆ ಮೇಲೆ ಬೆಳಕಿನ ಬೀಜಗಳು ಗೋಚರಿಸಿದವು. ಗುಹೆಯೊಳಗೆ ಹೊಳೆಯುತ್ತಿದ್ದ ರತ್ನಮಣಿಗಳ ಕಥೆ ನೆನಪಾಯಿತು. ಅಕ್ಕ, ಅಲ್ಲಮರಿಗೆ ಇಂಥ ಕತ್ತಲ ಗುಹೆಗಳಲ್ಲೆ ಬೆಳಕು ಕಂಡಿದ್ದಲ್ಲವೆ? ಅವೆಷ್ಟು ಎತ್ತರದಲ್ಲಿವೆಯೋ, ನಾವೆಷ್ಟು ಆಳದಲ್ಲಿರುವೆವೋ ಒಂದೂ ಅಂದಾಜಾಗಲಿಲ್ಲ. ಈಗಲೋ ಇನ್ನೊಂದು ಚಣಕ್ಕೋ ತನ್ನ ಬೆಳಕಿಗೆ ಮರುಳಾಗಿ ಬರಲಿರುವ ಬಲಿಗಾಗಿ ರತ್ನದೆಳೆಗಳ ಇಳಿಸಿಕೊಂಡು ಅದರೊಳಗೆ ಅತ್ತಿತ್ತ ಮಿಸುಗುತ್ತ, ಬೆಳಕು ಹೆಚ್ಚು ಕಡಿಮೆ ಮಾಡುತ್ತ ನಿಶ್ಚಲವಾಗಿದ್ದ ಜ್ಯೋತಿಬಿಂದುಗಳು ಕಾಣಿಸಿದವು. ಸೂರಿನಿಂದ ಇಳಿಬಿದ್ದ ಹೊಳೆವ ಸೇವಿಗೆ ಎಳೆಗಳ ನಡುವೆ ಹೊಳೆಹೊಳೆವ ಬೆಳಕಿನುಂಡೆಗಳು. ನರಮನುಷ್ಯರ ಉಗಮವಾಗುವುದಕ್ಕಿಂತ ಕೋಟ್ಯಂತರ ವರ್ಷಗಳ ಮುಂಚೆಯೇ ಈ ಭೂಮಿ ಮೇಲೆ ಬಂದ ಮೊಟ್ಟೆ ಲಾರ್ವಾ ಕೋಶ ಜೀವಿ ಕೀಟವೆಂಬ ಜೀವನ ಚಕ್ರದ ಹುಳಗಳನ್ನು ಕತ್ತು ಮೇಲೆತ್ತಿ ಕಣ್ಣು, ಮನ ತಣಿವಷ್ಟು ನೋಡಿದೆವು. ಆರ್ತರಾಗಿ ನೋಡಿದೆವು. ಕಣ್ತುಂಬಿಕೊಂಡೆವು. ಏನನ್ನು ಕಂಡು ಮುದಗೊಳ್ಳುವುದೋ ಮಗು ಅದರೆಡೆಗೆ ಕೈಚಾಚುತ್ತದೆ. ವೈಟಮೊ ಬೆಳಕಿನ ಹುಳಗಳ ಕಂಡಾಗ ನಮ್ಮೊಳಗಿನ ಮಗುತನ ಎಚ್ಚೆತ್ತು ಅವುಗಳತ್ತ ಕೈ ಚಾಚತೊಡಗಿತ್ತು.

ಮೆಲ್ಲ ಚಲಿಸುತ್ತಿದ್ದ ನಾವೆಯ ಕತ್ತಲಯಾನ ಕೆಲಸಮಯ ಮುಂದುವರೆಯಿತು. ಕೊನೆಗೆ ಅಗೋ ಅಷ್ಟು ದೂರದಲ್ಲಿ ಗುಹೆಯ ಬಾಯಲ್ಲಿ ಬೆಳಕು ಕಾಣತೊಡಗಿತು. ಕತ್ತಲು ಆಪ್ಯಾಯಮಾನವೆನಿಸಿದ

